ಎಮ್.ವಿ.ಸಿ. ನಂ.345/2024
PW-02

**ದಿನಾಂಕಃ 07-04-2026.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ-1 ನೇ ಎದುರುದಾರರ ಪರ ಶ್ರೀ SGF ಮಾನ್ಯ ವಕೀಲರಿಂದಃ**

ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿರುವುದಿಲ್ಲ ಅಂದರೆ ಸರಿ. ನಾನು ಅರ್ಜಿದಾರರಿಗೆ ನಿಪಿ.6 ನ್ನು ಕೊಡುವ ಸಂದರ್ಭದಲ್ಲಿ ಅರ್ಜಿದಾರರ ಗಾಯದ ಪ್ರಮಾಣ ಪತ್ರ ಹಾಗೂ discharge summary ಹಾಗೂ X-ray ಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ನಿಪಿ.6 ರಲ್ಲಿ ಅರ್ಜಿದಾರರಿಗೆ Clinical examination ಮಾಡಿ ಅವರಿಗೆ ಏನಾಗಿರುತ್ತದೆ ಎಂದು ಕ್ರಮ ಸಂಖ್ಯೆ 1 ರಿಂದ 3 ರಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಅರ್ಜಿದಾರರನ್ನು ಪರೀಕ್ಷೆ ಮಾಡಿದಾಗ ಅವರಿಗೆ ಯಾವುದೇ ಸೊಂಕು ಹಾಗೂ ನೋವು ಇರಲಿಲ್ಲ ಎಂದರೆ ಸರಿ. ನಾನು ಅರ್ಜಿದಾರರಿಗೆ ಪರೀಕ್ಷೆ ಮಾಡಿದಾಗ ಅವರ ಪಾದವನ್ನು ಸಂಪೂರ್ಣವಾಗಿ ಪರೀಕ್ಷೆ ಮಾಡಿರುತ್ತೇನೆ ಹಾಗೂ ಅವುಗಳ ಪರಿಚನೆಯ ಬಗ್ಗೆ ನಿಖರವಾಗಿ ಡಿಗ್ರಿಯನ್ನು ನಿಪಿ.6 ರಲ್ಲಿ ನಮೂದು ಮಾಡಿರುವುದಿಲ್ಲ. ನಾನು ಅರ್ಜಿದಾರರಿಗೆ ಕೇವಲ ಒಂದೆ ದಿನದಲ್ಲಿ ಪರೀಕ್ಷೆ ಮಾಡಿರುತ್ತೇನೆ ಎಂದರೆ ಸರಿ. ನಾನ ಸದರಿ ಪರೀಕ್ಷೆಯನ್ನು ಮಾಡಿದಾಗ ಅರ್ಜಿದಾರರು ಗಾಯವನ್ನು ಹೊಂದಿರುವ ಭಾಗಕ್ಕೆ x-ray ನ್ನು ತೆಗೆಸಿರುತ್ತೇನೆ. ಅರ್ಜಿದಾರನಿಗೆ ಸಹಾಯ ಮಾಡಲು ಸುಳ್ಳಾದ ಅಂಗನ್ಯೂನತೆ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಹೆಚ್ಚಿನ ಪ್ರಮಾಣದ ಅಂಗನ್ಯೂನತೆಯನ್ನು ತೋರಿಸಿ ಅದರ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.6 ರಲ್ಲಿ ನಮೂದು ಮಾಡಿರುವ ಗಾಯಗಳು ಬೇರೆ ಬೇರೆ ಕಾರಣಗಳಿಗೂ ಆಗಬಹುದು ಎಂದರೆ ಸರಿ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ.
ಶಹಾಪೂರ.